ಅ) ಹಾಗಿದ್ದಲ್ಲಿ ಈ ನಿಧಿಯನ್ನು ಯಾವ ಇಲಾಖೆಯಲ್ಲಿ ಇಡಲಾಗಿದೆ, ಹಾಗೂ ಎಷ್ಟು ನಿಧಿಯನ್ನು ಇಲ್ಲಿಯವರೆಗೆ ಸಂಗ್ರಹಿಸಲಾಗಿದೆ,

ಇ) ರಾಜ್ಯದಲ್ಲಿ ಪ್ರತಿಯೊಬ್ಬ ಶಿಕ್ಷಕರಿಂದ ಪಡೆಯುತ್ತಿರುವ ಹಣವನ್ನು ಇಲ್ಲಿಯವರೆಗೆ ಯಾವ ಯಾವ ಕಾರ್ಯಕ್ಕಾಗಿ ಉಪಯೋಗಿಸಲಾಗಿದೆ,

ಈ) ಪ್ರತಿಯೊಬ್ಬ ಶಿಕ್ಷಕರಿಂದ ಎಷ್ಟು ಹಣವನ್ನು ಪಡೆಯಲಾಗುತ್ತಿದೆ.

ಉ) ಈ ಹಣವನ್ನು ಬೇರ್ಪಡಿಸಿ ಸರ್ಕಾರದಿಂದ ಬಡ್ಡಿಯನ್ನು ಕೊಡಲು ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) —ಹೌದು—

ಆ) ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂಶವಾಗಿರುವ ಒಂದು ಸಮಿತಿಯ ಹೆಸರಿನಲ್ಲಿ ಇಡಲಾಗಿದೆ. ಇದುವರೆಗೆ ೬೯,೪೦,೬೧೩ ರೂಗಳ ನಿಧಿ ಸಂಗ್ರಹಿಸಲಾಗಿದೆ.

ಇ) ಈ ಹಣವನ್ನು ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಮತ್ತು ಅವರ ಹಾಗೂ ಅವರ ಆಶ್ರಿತರುಗಳಿಗೆ ವೈದ್ಯಕೀಯ ನೆರವಿನ ಸಲುವಾಗಿ ಹಾಗೂ ಸಾವು ಮತ್ತು ಅಪಘಾತಗಳಿಗಾಗಿ ಉಪಯೋಗಿಸಲಾಗುತ್ತಿದೆ.

ಈ) ಯಾವ ಶಿಕ್ಷಕರಿಂದಲೂ ಕಡ್ಡಾಯವಾಗಿ ವಂತಿಗೆ ವಸೂಲು ಮಾಡುತ್ತಿಲ್ಲ. ಆದರೆ ರಾಷ್ಟ್ರೀಯ ಶಿಕ್ಷಕರ ಪ್ರತಿಜ್ಞಾನದಿಂದ ೧೦ ಪೈಸೆಗಳಿಂದ ೧ ರೂ. ವರೆಗೆ ಬಾವುಟಗಳನ್ನು ಮಾರಿ ಹಣ ಪಡೆಯಲಾಗುತ್ತಿದೆ.

ಉ) ಈ ಹಣ ಸರ್ಕಾರದ ಹಣದ ಅಂಗವಲ್ಲ. ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಾತಿ ಇಡಲಾಗಿದೆ.

ಹಾನಗಲ್ ತಾಲ್ಲೂಕಿನಲ್ಲಿರುವ ಪಶುವೈದ್ಯ ಶಾಲೆಗಳು.

೪೦೮ (೯೦೫) ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಪಶುಸಂಗೋಪನೆ, ಹಾಗೂ ತೋಟಗಾರಿಕಾ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ ?

a) How many Veterinary Institutions are there in Hanagal Taluk ?

b) Have Doctors been posted to the sanctioned Veterinary Dispensaries ?

c) How many Years back Veterinary Dispensaries at Adur and Akkivalli were sanctioned ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (Minister for Animal Husbandry and Horticulture).—

a) Six.
b) Yes.
c) About a year back (1982–83).

Sub :—Embezlement of Rs. 4 Crores in purchase of Meterials and Equipments by the Animal Husbandry Department.

409 (907) SRI M. S. KRISHNAN (Rajajinagar).—Will the Minister for Animal Husbandry by pleased state.—

a) The amount earmarked in the budget estimates to the Department of Animal Husbandry and Vety. Services for the year 1982-83.

b) Out of the budget allotted the amount spent for the following items ;

1. Dairy Development and Equipments.
2. Polythene Film.
3. Veterinary Medicines.
4. Cattle Feed and Poultry Feed.
5. Surgical Instruments.

(Details of the quantity purchased for the above items may be given).

c) Whether the purchases are made according to the purchase rules ? If not, the action taken by the Government in this regard ;

d) Whether sanction was accorded by the Government to purchase the same ? If not, how the above items were purchased ?

e) Whether it is a fact that the then Director of Animal Husbandry had purchased the different types of materials and equipments and spent over and above the budget without prior approval of the Government ? If so, the steps taken by the Government in this regard ;

f) Whether there is any Vigilance Enquiry regarding the above misdeed against the then Director of Animal Husbandry and Vety. Services ; if so, the action taken by the Government ;

SRI VISHWANATHREDDY MUDNAL (Minister for Animal Husbandry and Horticulture).—

a)

	Plan	Non-plan	(Rs. in lakhs)
1.310-Animal Husbandry	296.50	914.09	
2.311-Dairy Development	50.00	516.98	
	346.50	1431.07	

Provision	Amount spent	Quantity purchased

1. Dairy equipment	4.89	4.89	10 items
2. Polythene Film	71.20	84.44	166 M. Tonnes
3. Vety. Medicines.	100.00	100.00	66 items
4. Cattle feed and Poultry feed	50.25	50.21	Cattle feed 1739 MT Poult feed 1327 MT
		Total	3066
5. Surgical instruments.	21.00	21.00	17 items.

c) Some irregularities in the purchase of a few items have come to the notice of the Government. The matter has been enquired into by the Vigilance Commission and the report received is under the examination of the Government.

d) —do—

e) —do—

f) —do—

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಂ ಬಸ್ಸಿನ ದರ

೫೧೦. (೧೨೬೦) ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಗೊತ್ತುಪಡಿಸಿದ ಹಂತ ಹಿಂದಿನ ಅರ್ಧ ಅಥವಾ ಒಂದು ಕಿ.ಮಿ. ಅಂತರದ ಹಳ್ಳಿಗಳಿಂದ ಗೊತ್ತುಪಡಿಸಿದ ಆದೇ ಹಂತದ ಮುಂದಿನ ಅರ್ಧ ಅಥವಾ ಒಂದು ಕಿ.ಮಿ. ಹಂತರದ ಹಳ್ಳಿಗಳಿಗೆ ಪ್ರಯಾಣ ಮಾಡುವವರು ಎರಡು ಹಂತದ ಪ್ರಯಾಣ ದರವನ್ನು ಅಂದರೆ ೧–೨೦ ಬಸ್ ಪ್ರಯಾಣದ ದರವನ್ನು ಕೇವಲ ಒಂದು ಕಿ.ಮಿ. ಅಂತರದ ಪ್ರಯಾಣ ಮಾಡಿದ್ದರೂ ಸಹ ಕೊಡಬೇಕಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಉಪಹಂತ ಮಾಡಲು ಅರ್ಧ ಅಥವಾ ಒಂದು ಕಿ.ಮಿ. ಅಂತರಕ್ಕೆ ೧೦ ಪೈಸೆಯಂತೆ ಪ್ರಯಾಣದ ದರ ವಿಧಿಸಲು ಸರಕಾರದವರಿಗೆ ಮನವಿಗಳು ಸಾರ್ವಜನಿಕರಿಂದ ಬಂದಿವೆಯೆ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಕೊಳ್ಳಲಿರುವ ಕ್ರಮವೇನು?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಸಚಿವರು).—

ಅ) ಬಂದಿವೆ

ಆ) ಬಂದಿವೆ

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣದ ದರವನ್ನು ಹಂತಗಳ ಮೇಲೆ ನಿಗಧಿಪಡಿಸಿದೆ. ಈ ಹಂತಗಳನ್ನು ಹೆಚ್ಚಿನ ಪ್ರಯಾಣಿಕರು ಹತ್ತುವ ಮತ್ತು ಇಳಿಯುವ ಕಡೆ ನಿಗಧಿಪಡಿಸಿರುವುದರಿಂದ, ಈ ಬಗ್ಗೆ ಬೇರೆ ಯಾವ ಕ್ರಮವನ್ನು ತೆಗೆದುಕೊಳ್ಳುವ ಯೋಚನೆ ಸರ್ಕಾರದ ಮುಂದೆ ಇಲ್ಲ.